ರಾಜ್ಯದಲ್ಲಿ ಕೊಳವೆ ಬಾವಿ ಮತ್ತು ಗಂಗಾ ಕಲ್ಯಾಣ ಯೋಜನೆ

3685(4176) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೈಯಕ್ತಿಕ ಕೊಳವೆ ಬಾವಿ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವಾರ್ಷಿಕ ಗುರಿ 2 ಅಥವಾ 3 ರಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಸದರೀ ಫಲಾನುಭವಿಗಳ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆದು ನೀರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳವೆ ಬಾವಿಗಳನ್ನು ಕೊರೆಯಲು ಬೇರೆ ಜಿಲ್ಲೆಯ ಗುತ್ತಿಗೆದಾರರಿಗೆ ಏಕೆ ವಹಿಸಲಾಗಿದೆ: ಸುಮಾರು 500 ಕಿ.ಮೀ ದೂರದಿಂದ ಇಲ್ಲಿಗೆ ಬಂದು ಕೊಳವೆ ಬಾವಿ ಕೊರೆಯದೇ ಇರುವುದರಿಂದ ಯೋಜನೆಯು ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬೆಳಗಾವಿ ಜಿಲ್ಲೆಯಲ್ಲಿ ಕೊಳವೆ ಬಾವಿ ಕೊರೆಯಲು ಏಜೆನ್ಸಿಗಳು ಇಲ್ಲದಿರುವ ಕಾರಣವೇನು;

ಈ) ಸದರಿ ಯೋಜನೆಯಲ್ಲಿ ಕನಿಷ್ಟ ಪಕ್ಷ 5 ರಿಂದ 10 ಫಲಾನುಭವಿಗಳನ್ನು ಆಯ್ಕೆ ಮಾಡುವಂತೆ ಸದರಿ ಸಮಿತಿ ಅನುಮತಿ ನೀಡಬಹುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆಯಲ್ಲಿರುವ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ಅನುಸಾರವಾಗಿ ಇಬ್ಬರು ಫಲಾನುಭವಿಗಳನ್ನು ಪ್ರತಿ ವಿಧಾನ ಕ್ಷೇತ್ರಕ್ಕೆ ನಿಗಧಿಪಡಿಸಲಾಗಿದೆ. ಈ ಫಲಾನುಭವಿಗಳನ್ನು ರಚಿಸಲಾಗಿರುವ ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಸಮಿತಿಗಳ ಮೂಲಕ ಆಯ್ಕೆ ಮಾಡಲಾಗುವುದು. ನಿಗಧಿಪಡಿಸಿದ ಗುರಿಯ ಪ್ರಕಾರ ವಿಧಾನ ಕ್ಷೇತ್ರದಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಲಾಗುತ್ತಿದೆ.

ಆ) ನೀರಿಲ್ಲದಿದ್ದರೆ ಹಣವಿಲ್ಲವೆಂಬ ತತ್ವದ ಆಧಾರದ ಮೇಲೆ ಟೆಂಡರ್ ಆಹ್ವಾನಿಸಿ ಕೊರೆಯುವ ಗುತ್ತಿಗೆದಾರರನ್ನು ನೇಮಿಸಲಾಗುತ್ತದೆ. ಪಾರದರ್ಶಕ ಕಾಯ್ದೆಯನ್ವಯ ಯಾವುದೇ ಅರ್ಹ ಸಂಸ್ಥೆ/ ಏಜೆನ್ಸಿ ಇಲಾಖೆಯು ಕರೆಯುವ ಟೆಂಡರ್‌ನಲ್ಲಿ ಭಾಗವಹಿಸಲು ಮುಕ್ತ ಅವಕಾಶವಿರುತ್ತದೆ.

2002–03ನೇ ಸಾಲಿಗೆ ಟೆಂಡರುಗಳನ್ನು ಎರಡು ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ಆಹ್ವಾನಿಸಲಾಗಿತ್ತು. ವ್ಯಾಪಕ ಪ್ರಚಾರ ನೀಡಿದ್ದರು ಕೆಲವು ಜಿಲ್ಲೆಗಳಿಂದ ಪ್ರತಿನಿಧಿಗಳು ಯಾರೂ ಭಾಗವಹಿಸಲಿಲ್ಲ. ಕೆಲವು ಪ್ರಕರಣಗಳಲ್ಲಿ ಎರಡನೇ ಬಾರಿಗೆ ಟೆಂಡರ್‌ನ್ನು ರಾಜ್ಯ ಮಟ್ಟದ ಮುಂಚೂಣಿ ಪತ್ರಿಕೆಗಳಲ್ಲಿ ಪುನಹಃ ಟೆಂಡರ್ ಪ್ರಕಟಿಸಿದ್ದರು ಅಗತ್ಯ ಪ್ರತಿಕ್ರಿಯೆ ದೊರಕಲಿಲ್ಲ. ಹೆಚ್ಚಿನ ದೂರದ ಕಾರಣದಿಂದಾಗಿ ಕೊಳವೆ ಬಾವಿ ಕೊರೆಯು ಪ್ರಗತಿ ಕುಂಟಿತವಾಗಿರುವ ಬಗ್ಗೆ ನಿರ್ದಿಷ್ಟ ಪ್ರಕರಣಗಳು ಯಾವುವು ಇರುವುದಿಲ್ಲ.

ಇ) 2003–04ನೇ ಸಾಲಿಗೆ ಬೆಳಗಾವಿ ಜಿಲ್ಲೆಗೆ ಮೆ: ಗೋವರ್ಧನ್ ಬೋರ್‌ವೆಲ್ಸ್, ರಾಯಭಾಗ್, ಬೆಳಗಾವಿ ಜಿಲ್ಲೆ ಹಾಗೂ ಮೆ: ಜಲದಾ ಬೋರ್‌ವೆಲ್ಸ್, ಧಾರವಾಡ ಎಂಬ ಎರಡು ಡ್ರಿಲ್ಲಿಂಗ್ ಏಜೆನ್ಸಿಗಳು ಟೆಂಡರ್ನಲ್ಲಿ ಭಾಗವಹಿಸಿ ದರ ನೀಡಿರುತ್ತಾರೆ. ಈ ಪೈಕಿ ಕಡಿಮೆ ದರ ನಮೂದಿಸಿದ್ದ ಮೆ: ಗೋವರ್ಧನ್ ಬೋರ್‌ವೆಲ್ಸ್, ರಾಯಬಾಗ್ ಬೆಳಗಾವಿ ಜಿಲ್ಲೆ ಇವರನ್ನು ಬೆಳಗಾವಿ ಜಿಲ್ಲೆಗೆ 21 ಕೊಳೆವೆ ಬಾವಿ ಕೊರೆಯಲು ದಿನಾಂಕ 8–4–2003ರಂದು ನೇಮಿಸಿ ಕಾರ್ಯಾದೇಶ ನೀಡಲಾಗಿದೆ.

ಈ) ಸಮಿತಿಯು ನಿಗಧಿಪಡಿಸಿರುವ ಗುರಿಗೆ ಅನುಸಾರವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬಹುದು. ಆದಾಗ್ಯೂ, ಇದು ಅನುದಾನದ ಲಭ್ಯತೆಯನ್ನು ಅವಲಂಬಿಸಿರುತ್ತದೆ.